**ಹಿರಿಯ ಸಿವಿಲ್ ನ್ಯಾಯಾಧೀಶರ ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ,**

**ತಿ.ನರಸೀಪುರ**

**ಸಿಸಿ ಸಂಖ್ಯೆ: 69/2018**

ಪಿರ್ಯಾದುದಾರರು : ಕರ್ನಾಟಕ ಸರಕಾರದ ಪರವಾಗಿ ತಿ.ನರಸೀಪುರ ಪೊಲೀಸ ಠಾಣೆ, ತಿ.ನರಸೀಪುರ.

ವಿರುದ್ಧ

ಆರೋಪಿತರು :

1. ದಲ್ಲಾಳಿ ಮಾದಯ್ಯ ಉ: ಮಹದೇವಯ್ಯ
   56 ವರ್ಷ.

2. ವೀರಭದ್ರ ಉಃ ಮಹದೇವಸ್ವಾಮಿ
   ಬಿನ್ ಮಹದೇವಯ್ಯ
   38 ವರ್ಷ.

3. ಮಹದೇವಸ್ವಾಮಿ ಬಿನ್ ಮಹದೇವಯ್ಯ
   31 ವರ್ಷ.

ಎಲ್ಲರ ವಾಸಃ ಕಾರ್ಗಳ್ಳಿ ಗ್ರಾಮ,
ತಿ. ನರಸೀಪುರ ತಾಲ್ಲೂಕು,
ಮೈಸೂರು ಜಿಲ್ಲೆ.

**ದಂಡ ಪ್ರಕ್ರಿಯೇ ಸಂಹಿತೆ ಕಲಂ. 313 ರ ಪ್ರಕಾರ ಆರೋಪಿತರ ವಿಚಾರಣೆ**

ಪ್ರಶ್ನೆಃ 1. ನ್ಯಾಯಾಲಯದಲ್ಲಿ ಅಭಿಯೋಜನೆಯ ಸಾಕ್ಷಿಯು ನುಡಿದಿರುವ ಸಾಕ್ಷ್ಯವನ್ನು ಕೇಳಿಸಿಕೊಂಡಿದ್ದೀರಾ?

ಉತ್ತರಃ

ಪ್ರಶ್ನೆಃ 2. ಫ್ರಾಸಾ-1/ಜಯಮ್ಮ ರವರು ತಮ್ಮ ಸಾಕ್ಷ್ಯದಲ್ಲಿ, ಸುಮಾರು 5 ವರ್ಷಗಳ ಹಿಂದೆ ಮಧ್ಯಾಹ್ನ 2.00 ಗಂಟೆಗೆ ತಮ್ಮ ಗ್ರಾಮದಲ್ಲಿರುವ ತಮ್ಮ 29 ಗುಂಟೆ ಜಮೀನಿಗೆ ನೀರು ಕೊಡುವಂತೆ ತಾನು 1ನೇ ಆರೋಪಿಯಾದ ನಿಮ್ಮನ್ನು ಕೇಳಿದಾಗ ನೀವು ನೀರನ್ನು ಅಡ್ಡಗಟ್ಟಿ, ಆ ನೀರು ಗಂಗಾ ಕಲ್ಯಾಣ ಯೋಜನೆಗೆ ಒಳಪಟ್ಟಿದ್ದು, ಅದನ್ನು ತನಗೆ, ರಾಚಯ್ಯ, ಸೋಮಣ್ಣ ಮತ್ತು ಬೋಗಸಯ್ಯ ರವರಿಗೆ ಮಾಡಲಾಗಿತ್ತು ಎಂದು ಆರೋಪಿತರಾದ ನಿಮ್ಮ ವಿರುದ್ಧ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನಾದರೂ ಹೇಳುವುದು ಇದಿಯೆ?

ಉತ್ತರಃ -

ಪ್ರಶ್ನೆಃ 3. ಫ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ತಾನು ನೀರನ್ನು 1ನೇ ಆರೋಪಿತರಾದ ನಿಮ್ಮನ್ನು ಕೇಳಿದಾಗ ನೀವು ನಿಮಗೆ ನೀರು ಸಾಲುವುದಿಲ್ಲವೆಂದು ತನಗೆ ಹೇಳಿ ಆ ನೀರು ತನಗೂ ಕೂಡ ಸೇರಬೇಕೆಂದು ತಾನು ಹೇಳಿದಾಗ ನೀವು ತನಗೆ ಅವ್ಯಾಚ್ಯ ಶಬ್ದಗಳಿಂದ ಬೈದು, ತನ್ನನ್ನು ಕೆಳಕ್ಕೆ ಕೆಡವಿ ದೊಣ್ಣೆಯಿಂದ ತನ್ನ ತಲೆಗೆ ಮತ್ತು ಮೈಕೈಗೆ ಹೊಡೆದಿದ್ದು, 2 ಮತ್ತು 3ನೇ ಆರೋಪಿತರಾದ ನೀವು ತನಗೆ ಬೈದಿದ್ದು, 1ನೇ ಆರೋಪಿಯಾದ ನೀವು ತನ್ನ ತಲೆ

ಕೂದಲನ್ನು ಹಿಡಿದು ಎಳೆದಾಡಿದ್ದು, ಆರೋಪಿತರಾದ ನೀವೆಲ್ಲರೂ ತನಗೆ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿರುತ್ತೀರಿ ಎಂದು ಆರೋಪಿತರಾದ ನಿಮ್ಮ ವಿರುದ್ಧ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನಾದರೂ ಹೇಳುವುದು ಇದಿಯೆ?

ಉತ್ತರಃ –

ಪ್ರಶ್ನೆಃ 4. ಪ್ರಾಸಾ–1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಚಾಸಾ–3/ಪುಟ್ಟಯ್ಯ ಮತ್ತು ಚಾಸಾ–2/ಮಹದೇವಮೂರ್ತಿ ರವರು ಗಲಾಟೆ ಬಿಡಿಸಿದ್ದು, ನಂತರ ತಾನು ತಿ. ನರಸೀಪುರ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ ಎಂದು, ಆ ವೇಳೆಗೆ ಪೊಲೀಸರು ಅಲ್ಲಿಗೆ ಬಂದು ದೂರನ್ನು ಪಡೆದಿರುತ್ತಾರೆ ಎಂದು ಆರೋಪಿತರಾದ ನಿಮ್ಮ ವಿರುದ್ಧ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನಾದರೂ ಹೇಳುವುದು ಇದಿಯೆ?

ಉತ್ತರಃ –

ಪ್ರಶ್ನೆಃ 5. ಪ್ರಾಸಾ–6/ಪುಟ್ಟಮಾದಯ್ಯ ರವರು ತಮ್ಮ ಸಾಕ್ಷ್ಯದಲ್ಲಿ, ಕಳೆದ 6 ವರ್ಷಗಳ ಹಿಂದೆ ಮಧ್ಯಾಹ್ನ 2.00 ಗಂಟೆ ಸಮಯದಲ್ಲಿ ತಮ್ಮ ಜಮೀನಿನಲ್ಲಿ ಆರೋಪಿತರಾದ ನೀವು ನೀರಿನ ವಿಚಾರಕ್ಕೆ ತನ್ನ ಹೆಂಡತಿಯ ಜೊತೆ ಗಲಾಟೆ ಮಾಡಿ ಆಕೆಗೆ ಅವ್ಯಾಚ್ಯ ಶಬ್ದಗಳಿಂದ ಬೈದು, 1ನೇ ಆರೋಪಿತರಾದ ನೀವು ದೊಣ್ಣೆಯಿಂದ ಆಕೆಯ ಎಡಭುಜಕ್ಕೆ ಹೊಡೆದು, 2 ಮತ್ತು 3ನೇ ಆರೋಪಿತರಾದ ನೀವು ಆಕೆಯ ತಲೆಯ ಕೂದಲನ್ನು ಹಿಡಿದು ಎಳೆದಾಡಿ, ನಿಮ್ಮ ಕೈಗಳಿಂದ

ಆಕೆಯ ಮೈಕೈಗೆ ಮತ್ತು ತಲೆಗೆ ಹೊಡೆದಿರುತ್ತೀರಿ ಎಂದು ಆರೋಪಿತರಾದ ನಿಮ್ಮ ವಿರುದ್ದ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನಾದರೂ ಹೇಳುವುದು ಇದಿಯೆ?

ಉತ್ತರಃ –

ಪ್ರಶ್ನೆಃ 6. ಫ್ರಾಸಾ–6 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಗಲಾಟೆಯ ವಿಷಯವನ್ನು ಚಾಸಾ–3 ಮತ್ತು ಫ್ರಾಸಾ–3/ಕೆಂಚ ರವರು ತನಗೆ ತಿಳಿಸಿದ್ದು, ತಾನು ಗಲಾಟೆಯನ್ನು ಬಿಡಿಸಲು ಹೋದಾಗ ಆರೋಪಿತರಾದ ನೀವು ಅಲ್ಲಿಂದ ಹೋಗಿರುತ್ತೀರಿ ಎಂದು ಆರೋಪಿತರಾದ ನಿಮ್ಮ ವಿರುದ್ದ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನಾದರೂ ಹೇಳುವುದು ಇದಿಯೆ?

ಉತ್ತರಃ –

ಪ್ರಶ್ನೆಃ 7. ಫ್ರಾಸಾ–4/ಡಾಃ ಗೋವಿಂದಶೆಟ್ಟಿ ರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 05.05.2017 ರಂದು ಸಂಜೆ 4.00 ಗಂಟೆ ಸಮಯದಲ್ಲಿ ಫ್ರಾಸಾ–1 ರವರು ಹಲ್ಲೆಯ ಹಿನ್ನೆಲೆಯಲ್ಲಿ ಚಿಕಿತ್ಸೆಗೆ ತನ್ನ ಬಳಿಗೆ ಬಂದಿದ್ದು, ಅವರನ್ನು ಪರೀಕ್ಷಿಸಿದಾಗ ಅವರ ಹಣೆಯ ಬಲಭಾಗದಲ್ಲಿ 3 x 2 ಸೆ.ಮೀ ಅಳತೆಯ ಊತ, ಅವರ ತೊಳಿನ ಮೇಲೆ 3 x 1 ಸೆ.ಮೀಃ ಅಳತೆಯ ತರಚಿದ ಗಾಯ ಮತ್ತು ಎಡ ದವಡೆಯಲ್ಲಿ 3 x 1 ಸೆ.ಮೀ ಅಳತೆಯ ಊತ ಇದ್ದು, ಅವುಗಳು ಸಾದಾ ಸ್ವರೂಪದವಾಗಿದ್ದು, ಅವರಿಗೆ ಚಿಕಿತ್ಸೆ ನೀಡಿ, ಆ ಕುರಿತು ಗಾಯದ ಪ್ರಮಾಣ

ಪತ್ರ ನೀಡಿದ್ದು, ಸದರಿ ಗಾಯಗಳು ಒಬ್ಬ ವ್ಯಕ್ತಿಗೆ ಮತ್ತೊಬ್ಬ ವ್ಯಕ್ತಿ ದೊಣ್ಣೆಯಿಂದ ಹೊಡೆದರೆ ಆಗಬಹುದು ಎಂದು ಮತ್ತು ನ್ಯಾಯಾಲಯದಲ್ಲಿರುವ ದೊಣ್ಣೆಯಿಂದ ಹೊಡದರೆ ಆ ಗಾಯಗಳು ಆಗಬಹುದು ಎಂದು ಆರೋಪಿತರಾದ ನಿಮ್ಮ ವಿರುದ್ದ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನಾದರೂ ಹೇಳುವುದು ಇದಿಯೆ?

ಉತ್ತರಃ –

ಪ್ರಶ್ನೆಃ 8. ಫ್ರಾಸಾ–5/ಆನಂದ್ ಎನ್ ರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 06.05.2017 ರಂದು ಮಧ್ಯಾಹ್ನ 1.00 ಗಂಟೆಗೆ ತಿ. ನರಸೀಪುರದ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ, ಫ್ರಾಸಾ–1 ರವರು ನೀಡಿದ ದೂರನ್ನು ಸ್ವೀಕರಿಸಿ, ಅದರ ಮೇಲೆ ಅಪರಾಧ ಸಂಖ್ಯೆ 168/2017 ರಲ್ಲಿ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿ ಅದನ್ನು ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ಸಲ್ಲಿಸಿರುತ್ತೇನೆ ಎಂದು ಆರೋಪಿತರಾದ ನಿಮ್ಮ ವಿರುದ್ದ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನಾದರೂ ಹೇಳುವುದು ಇದಿಯೆ?

ಉತ್ತರಃ –

ಪ್ರಶ್ನೆಃ 9 ಫ್ರಾಸಾ–5 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಅದೇ ದಿನ ಘಟನಾ ಸ್ಥಳಕ್ಕೆ ಭೇಟಿ ನೀಡಿ, ಫ್ರಾಸಾ–1ರವರು ತೋರಿಸಿದಂತೆ ಫ್ರಾಸಾ–2 ಮತ್ತು ಚಾಸಾ–3 ರವರ ಸಮಕ್ಷಮ ಪಂಚನಾಮೆಯನ್ನು ಮಧ್ಯಾಹ್ನ 3.00 ರಿಂದ 3.45 ಗಂಟೆ ಸಮಯದಲ್ಲಿ ಜರುಗಿಸಿ, ಫ್ರಾಸಾ–

1ರವರು ಹಾಜರು ಪಡಿಸಿದ 3 ಅಡಿ ಉದ್ದದ ದೊಣ್ಣೆಯನ್ನು ಜಪ್ತಿಪಡಿಸಲಾಯಿತು ಎಂದು, ಅದನ್ನು ಸ್ವತ್ತಿನ ಪಟ್ಟಿಯಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದು, ಅದೇ ದಿನ ಫ್ರಾಸಾ–1 ರವರ ಮರು ಹೇಳಿಕೆ, ಚಾಸಾ–2, 3, ಫ್ರಾಸಾ–2, 3 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ ಎಂದು ಆರೋಪಿತರಾದ ನಿಮ್ಮ ವಿರುದ್ದ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೆನಾದರೂ ಹೇಳುವುದು ಇದಿಯೆ?

ಉತ್ತರಃ –

ಪ್ರಶ್ನೆಃ 10. ಫ್ರಾಸಾ–5 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಫ್ರಾಸಾ–1 ರವರ ಹೇಳಿಕೆಯನ್ನು ನ್ಯಾಯಾಲಯದಲ್ಲಿ ದಾಖಲಿಸುವಂತೆ ನ್ಯಾಯಾಲಯಕ್ಕೆ ಕೋರಿಕೊಂಡಿದ್ದು, ದಿನಾಂಕ 03.06.2017 ರಂದು ಅವರ ಹೇಳಿಕೆಯನ್ನು ನ್ಯಾಯಾಲಯವು ಪಡೆದುಕೊಂಡಿದ್ದು, ಅದರ ಪ್ರತಿಯನ್ನು ನ್ಯಾಯಾಲಯದಿಂದ ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ ಎಂದು, ದಿನಾಂಕ 01.10.2017 ರಂದು ಫ್ರಾಸಾ–1ರವರ ಗಾಯದ ಪ್ರಮಾಣ ಪತ್ರವನ್ನು ಫ್ರಾಸಾ–4 ರವರಿಂದ ಪಡೆದುಕೊಂಡು, ಪ್ರಕರಣದ ತನಿಖೆಯನ್ನು ಪೂರ್ಣಗೊಳಿಸಿ ಆರೋಪಿತರಾದ ನಿಮ್ಮ ವಿರುದ್ಧ ದೋಷರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ ಎಂದು ಆರೋಪಿತರಾದ ನಿಮ್ಮ ವಿರುದ್ದ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೆನಾದರೂ ಹೇಳುವುದು ಇದಿಯೆ?

ಉತ್ತರಃ –

ಪ್ರಶ್ನೆಃ 10. ನೀವು ಏನಾದರೂ ಹೇಳುವುದಕ್ಕೆ ಬಯಸುತ್ತೀರಾ?

**ಉತ್ತರಃ –**

ಪ್ರಶ್ನೆಃ 11. ನೀವು ಸಾಕ್ಷಿ ವಿಚಾರಣೆ ಮಾಡಬಯಸುತ್ತೀರಾ?

**ಉತ್ತರಃ –**

(ಆರೋಪಿತರ ಹೇಳಿಕೆಯನ್ನು ಸ್ವತಃ ನಾನೇ ನನ್ನ ಸಮಕ್ಷಮ ಪಡೆದಿದ್ದು, ಅವರು ನುಡಿದಿದ್ದನ್ನು ಕೇಳಿಸಿಕೊಂಡು ಅವರು ಹೇಳಿದ್ದನ್ನು ನಮೂದಿಸಿರುತ್ತೇನೆಂದು ದೃಢೀಕರಿಸುತ್ತೇನೆ.)

ದಿನಾಂಕಃ 05.02.2026.

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ, ತಿ.ನರಸೀಪುರ**